SRI A.K. ABDUL SAMAD.—Sir, that will be a separate question.

MR. SPEAKER.—The Hon. Minister for Food and Civil Supplies is not felling well. He is under going treatment in the Hospital. Now, I will hold over this question. I will ask the Government to obtain full information in respect of points which you have now referred to. The Hon. Minister will kindly take note of it we will take up this question on some other day.

ಚು. ಪ್ರ. ೪೭ (೨೫೮)

ಅಧ್ಯಕ್ಷರು.—ಮಾನ್ಯ ರೇಷ್ಮೆ ಖಾತೆ ಸಚಿವರು ಕೇಂದ್ರ ಸರ್ಕಾರದ ಸಭೆಯೊಂದರಲ್ಲಿ ಭಾಗವಹಿಸಲು ಹೋಗುತ್ತಿರುವುದಾಗಿ ಅವರು ನನಗೆ ಪತ್ರವನ್ನು ಬರೆದಿರುವುದರಿಂದ ಈ ಪ್ರಶ್ನೆಯನ್ನು ತಡೆಹಿಡಿದಿದ್ದೇನೆ.

Persons arrested under National Security Ordinance in the State

259. SRI M. CHANDRASHEKAR (Jayanagar).—Will the Chief Minister be pleased to state.—

(a) the number of persons arrested under National Security Ordinance in the State of Karnataka upto date;

(b) the details of offences for which each of them were arrested;

(c) Number of persons released on the recommendation of the Advisory Board?

SRI R. GUNDU RAO (Chief Minister).—

(a) 17 persons.

(b) These persons were acting in a manner prejudicial to the maintenance of public order.

(c) 6 persons.

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೆ, ನಾನು, ನನ್ನ (ಅ) ಪ್ರಶ್ನೆಯಲ್ಲಿ ''ಬಂಧಿಸಲ್ಪಟ್ಟ ಪ್ರತಿಯೊಬ್ಬರೂ ಮಾಡಿದ ಅಪರಾಧಗಳ ವಿವರಗಳೇನು''? ಎಂದು ಸ್ಪಷ್ಟವಾಗಿ ಕೇಳಿದ್ದೇನೆ. ಇದರಲ್ಲಿ ತಾವು ಉತ್ತರವನ್ನು ಕೊಡುವಾಗ ಬಹಳ ಸೂಕ್ಷ್ಮವಾಗಿ ''ಸಾರ್ವಜನಿಕ ಶಾಂತಿ ಮತ್ತು ಶಿಸ್ತುಪಾಲನೆಗೆ ಪ್ರತಿಕೂಲವಾಗುವ ರೀತಿಯಲ್ಲಿ ಈ ವ್ಯಕ್ತಿಗಳು ವರ್ತಿಸುತ್ತಿದ್ದರು'' ಎಂದು ಹೇಳಿದ್ದೀರಿ. ಇದರಲ್ಲಿ ರಾಜಕೀಯ ಅಪರಾಧಗಳಿಗಾಗಿ ಬಂಧಿಸಲ್ಪಟ್ಟವರ ಸಂಖ್ಯೆ ಎಷ್ಟು? ಮತ್ತು ಆರ್ಥಿಕವಾಗಿ ಅಪರಾಧಗಳಿಗಾಗಿ ಬಂಧಿಸಲ್ಪಟ್ಟವರ ಸಂಖ್ಯೆ ಎಷ್ಟು? ಹಾಗೂ ಮತ್ತಿತರೆ ಅಪರಾಧಗಳಿಗಾಗಿ ಬಂಧಿಸಲ್ಪಟ್ಟವರ ಸಂಖ್ಯೆ ಎಷ್ಟು? ಎಂಬುದನ್ನು ಹೇಳುತ್ತೀರಾ?

† ಶ್ರೀ ಆರ್. ಗುಂಡೂರಾವ್.—ರಾಜಕೀಯ ಅಪರಾಧಗಳಿಗಾಗಿ ಬಂಧಿಸುವ ಕೆಲಸಕ್ಕೆ ನಾವು ಹೋಗಿಲ್ಲ. ನೀವು ಅಷ್ಟು ದೂರ ಹೋಗಿ ಹೆದರಬೇಕಾಗಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಯಾವಾಗ ಹೋಗುತ್ತೀರಿ?

ಶ್ರೀ ಆರ್. ಗುಂಡೂರಾವ್.—ರಾಜಕೀಯ ಅಪರಾಧಗಳಿಗಾಗಿ ಬಂಧಿಸುವ ಕೆಲಸಕ್ಕೆ ನಾವು ಹೋಗುವುದಿಲ್ಲ. ನೀವೇನೂ ಚಿಂತಿಸಬೇಡಿ.

ಶ್ರೀ ಎಂ. ಚಂದ್ರಶೇಖರ್.—ಬಿಡುಗಡೆ ಆಗಿರುವವರ ಪೈಕಿ ಬೆಂಗಳೂರು ನಗರಕ್ಕೆ ಸೇರಿದವರು ಎಷ್ಟು ಮಂದಿ ಇದ್ದಾರೆ ?

ಶ್ರೀ ಆರ್. ಗುಂಡೂರಾವ್.—ಬಹಳ ಜನ ಬೆಂಗಳೂರು ನಗರಕ್ಕೆ ಸೇರಿದವರೇ ಇದ್ದಾರೆ.

ಶ್ರೀ ಎ. ಜೆ. ಕೊಡಗಿ.—ಮಾನ್ಯ ಮುಖ್ಯ ಮಂತ್ರಿಯವರು (ಅ) ಪ್ರಶ್ನೆಗೆ ಉತ್ತರಿಸುತ್ತಾ ''ಸಾರ್ವಜನಿಕ ಶಾಂತಿ ಮತ್ತು ಶಿಸ್ತುಪಾಲನೆಗೆ ಪ್ರತಿಕೂಲವಾಗುವ ರೀತಿಯಲ್ಲಿ ಈ ವ್ಯಕ್ತಿಗಳು ವರ್ತಿಸುತ್ತಿದ್ದರು'' ಅಂಥಾ ವ್ಯಕ್ತಿಗಳನ್ನು ಮಾತ್ರ ಅರೆಸ್ಟ್ ಮಾಡಿದ್ದೇವೆಂದು ಹೇಳಿದ್ದಾರೆ. ಇದರಲ್ಲಿ ಹಣದ ದುರುಪಯೋಗ ಮಾಡಿದ ಮತ್ತು ಕಾಳಸಂತೆಕೋರರನ್ನು ರಾಷ್ಟ್ರೀಯ ಭದ್ರತಾ ಅಧ್ಯಾದೇಶದ ಮೇರೆಗೆ ಬಂಧಿಸಲಾಗಿದೆಯೆ ?

ಅಧ್ಯಕ್ಷರು.—ತಾವು ಕೇಳುತ್ತಿರುವುದು ಎರಡೂ ಪ್ರತ್ಯೇಕ ಪ್ರಶ್ನೆಗಳು. ತಾವು ಯಾವುದಾದರೂ ಒಂದನ್ನು ಕೇಳಿ. ನೀವು ಕೇಳುತ್ತಿರುವ ಎರಡು ಪ್ರಶ್ನೆಗಳೂ ಒಂದಕ್ಕೊಂದು ವ್ಯತ್ಯಾಸವಿದೆ.

ಶ್ರೀ ಎ. ಜೆ. ಕೊಡಗಿ.—ಹಣದ ದುರುಪಯೋಗದ ಆಪಾದನೆ ಮೇಲೆ ಮತ್ತು ಕಾಳಸಂತೆಕೋರ ತನದ ಮೇಲೆ ಬಂಧಿಸಲಾಗಿದ್ದರೆ ತಿಳಿಸಿ.

ಶ್ರೀ ಆರ್. ಗುಂಡೂರಾವ್.—ಆರ್ಥಿಕವಾಗಿ, ಸಮಾಜಘಾತುಕ ಕೃತ್ಯಗಳಲ್ಲಿ ತೊಡಗಿದ್ದವರ ಒಂದು ಪಟ್ಟಿಯನ್ನೇ ಕೊಟ್ಟಿದ್ದೇವೆ.

ಶ್ರೀ ಕೆ. ಬಿ. ಶಿವಯ್ಯ.—ನೀವು ಬಂಧಿಸಿರುವವರಲ್ಲಿ ಮೈಸೂರು ಜಿಲ್ಲೆಯವರು ಎಷ್ಟು ಮಂದಿ ಇದ್ದಾರೆ ಮತ್ತು ಎಷ್ಟು ಮಂದಿಯನ್ನು ಬಿಡುಗಡೆ ಮಾಡಿದ್ದೀರಿ ?

ಶ್ರೀ ಆರ್. ಗುಂಡೂರಾವ್.—ಮೈಸೂರು ಜಿಲ್ಲೆಯವರು ಯಾರೂ ಇಲ್ಲ. ಇದರ ಬಗ್ಗೆ ನಿಮಗೆ ಯಾವ ಭಯವೂ ಬೇಡ.

Auction of Arrack and Toddy in the State

69. SRI G. RAJU GOWDA (Hanur).—Will the Chief Minister be pleased to state.—

(a) from which date the arrangement for auctioning the right of sale of Toddy and Arrack at District and Taluk levels respectively has been brought into force in the State ;

(b) whether the Government has thought of auctioning of three shops at individual village levels according to the old method, if the Government has any intention to provide standard variety of Toddy and Arrack to the general public ;

(c) whether the Government are aware of the fact that doing so the Government may derive more income than the income it gets at present ?

---

*Copy to placed in the Karnataka Legislature Library Vide No. 5 dated 6th February 1981.